ವಿಮರ್ಶಕರಾಗಿ, ಕಥೆಗಾರರಾಗಿ ಕನ್ನಡ ಸಾಹಿತ್ಯ ಲೋಕದಲ್ಲಿ ಗುರುತಿಸಿಕೊಂಡ ರಾಜಶೇಖರ ಹಳೆಮನೆ ಅವರು, ಉಜಿರೆಯ ಎಸ್‌ಡಿಎಂ ಸ್ನಾತಕೋತ್ತರ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. 'ಸಿಲ ಉಡಿಯ ಕತೆಗಳು', 'ಬೊಗಸೆಯಷ್ಟು ಓದು', 'ರೂಪ ಸ್ವರೂಪ', 'ಭವದ ಪಾಡು' ಕೃತಿಗಳನ್ನು ಪ್ರಕಟಿಸಿದ್ದಾರೆ.

ನಮಗಾ ಸರಕಾರದಿಂದ ಪಿಂಚಣಿ ಬರವಲ್ಲತು. ಮಕ್ಕಳು ಯಾರು ಸೇರಸವಲ್ಲರು. ದುಡ್ಯಾಕ ಮೈಯ್ಯಾಗ ಸತುವು ಇಲ್ಲ. ನಮಗ ರೊಕ್ಕ ಬರ್‍ರಂಗ ಮಾಡ್ರಿ. ರೊಕ್ಕ ಬರ್‍ರಂಗ ಮಾಡ್ತೀನಂತ ಆ ಅಮರೇಶ ಐದುನೂರು ಇಸಗಂಡಾನ. ಇನ್ನಾ ಬರವಲ್ಲವು' ಎಂದು ಕೆಲವು ಮುದುಕರು ಹೇಳುತ್ತಿದ್ದರು.

'ನೋಡಪ್ಪಾ ನಮಗ ರೇಷನ್ ಬರವಲ್ಲವು. ಅದೇನೇನೋ ಕಾರ್ಡ್ ಮಾಡಸಬೇಕಂತ ಹೇಳ್ತಾರ. ನಮಗ ತಿಳಿದಿಲ್ಲ. ಅದೇ ಅಮರೇಶಗ ಐದು ಐದು ನೂರು ಕೊಟ್ಟೇವಿ. ಇನ್ನೂ ಮಾಡಿಸಿಲ್ಲ' ಅಂತ ಕೆಲವರು. 'ನಮ್ಮೊಲಕ್ಕ ಕೆರೆ ತೋಡಿಸಾಕ ಇನ್ನಾ ರೊಕ್ಕನೆ ಬಂದಿಲ್ಲ. ಅದಕ್ಕೂ ಐದೈದು ಸಾವಿರ ಇಸಗಂಡಾರ' ಅಂತ ಕೆಲವರು. 'ನಮ್ಮ ಕೇರಿಗಳಂತೂ ಗಬ್ಬೆದ್ದು ನಾರತಾವ. ಆ ನಳ ಹಾಕಿ ಹೋಗ್ಯಾರ ಪೈಪ್ ಒಡದು ನೀರು ಸೋರಾಕತ್ತ್ಯಾವ. ಕೊಳಚೆ ನೀರು ಹೋಗೋ ಮೋರಿಗಳೆಲ್ಲಾ ತುಂಬಿ ಮನೆ ಮುಂದೆಲ್ಲಾ ಹೊಲಸು ನೀರು ಬಂದು ನಿಲ್ತಾವ. ಮೋರಿ ಸ್ವಚ್ಛ ಮಾಡೋರು ಬರೋದೇ ಇಲ್ಲ. ಸೊಳ್ಳೆ ಕಡಿಸಿಗಂಡು ಮೈಯ್ಯಾಗ ರಕ್ತ ಇಲ್ಲದಾಂಗ ಆಗ್ಯಾದ' ಅಂತ ಕೆಲವರು, 'ಜನತಾ ಮನೆ ಕೊಟ್ಟೋರಿಗೆ ಕೊಟ್ಟಾರ' ಅಂತ ಕೆಲವರು, 'ಏನೋ ನಮ್ಮಾತ ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಆಗ್ಯಾನ. ಏನಾರ ಅನುಕೂಲ ಮಾಡ್ತಾನಂದರ ಒಂದು ಕೆಲಸ ಆಗವಲ್ಲವು' ಎಂದು ಒಬ್ಬರಿಗೊಬ್ಬರು ತಮ್ಮ ತಮ್ಮ ಸಮಸ್ಯೆಗಳನ್ನು ಹೇಳುತ್ತಿದ್ದರು.

ರುದ್ರೇಶ ಶ್ರದ್ಧೆಯಿಂದ ಬರೆದುಕೊಳ್ಳುತ್ತಿದ್ದ. ದುರುಗಪ್ಪ ಸಾಹುಕಾರ ಬಂದು ಗೇಟು ಒಳಗ ಖುರ್ಚಿ ಮ್ಯಾಗ ಕುಂತ. ಜನಗಳು 'ಸಾಹುಕಾರ ಬಂದ ಸಾಹುಕಾರ ಬಂದ' ಎಂದು ಗೇಟ್ ಮುಂದೆ ಓಡಿ ಬಂದರು. ರುದ್ರೇಶ ಅವರನ್ನೆಲ್ಲಾ ತಡದು 'ಹೇ ಒಬ್ಬೊಬ್ಬರ ಬರ್‍ರಿ. ನೀವು ಹೇಳಿದ್ದೆಲ್ಲಾ ಬರಕಂಡೀನಿ. ಮತ್ತೆ ಸಾಹೇಬರಿಗೆ ಹೇಳ್ತೀನಿ' ಎಂದು ತಡದು ನಿಲ್ಲಿಸಿದ. ಮುಂದ ನಿಂತಿದ್ದ ಎಲ್ಲಪ್ಪನ 'ನೀನೋಗಪಾ' ಎಂದು ಕಳಿಸಿದ.

ಎಲ್ಲಪ್ಪ ತನ್ನ ಮಗನ್ನ ಮುಂದ ಮಾಡಿಕೊಂಡು'ಅಣ್ಣಾ ನಿಮ್ಮ ದೊಡಪ್ಪನ ಮಗ ಎಲ್ಲಪ್ಪ ನಾನು. ಇವನು ನನ ಮಗ. ಡಿಗ್ರಿ ಮುಗಿಸ್ಯಾನ. ಎಲ್ಲಿ ಕೆಲಸ ಸಿಗವಲ್ತಪ. ಕೂಲಿ ಕೆಲಸಕ್ಕ ಬಾ ಅಂದ್ರ ನಾನು ಡಿಗ್ರಿ ಮುಗಿಸೀನಿ ಕೂಲಿ ಮಾಡದಿಲ್ಲ ಅಂತಾನ. ಏನಾರ ಒಂದು ಕೆಲಸ ಕೊಡಸಪಾ' ಎಂದು ಗೇಟು ಒಳಗಡೆಯಿಂದನೆ ಕಾಲು ಮುಟ್ಟಿ ನಮಸ್ಕರಿಲು ಪ್ರಯತ್ನಿಸಿದ.

'ಹಾ... ಗೊತ್ತಾಯ್ತು. ನೋಡಮು ಪ್ರಯತ್ನ ಮಾಡಮು. ಹೇ ರುದ್ರ ಅವನ್ನ ಡಿಟೇಲ್ಸ ಎಲ್ಲಾ ತಗೋ. ಚಿಂತಿ ಮಾಡಬ್ಯಾಡ. ಏನಾರ ಕೆಲಸ ಕೊಡಸ್ತೀನಿ' ಎಂದು ಬಿಳಿ ಟವಲಿನಿಂದ ಕಪ್ಪು ಮುಖವನ್ನು ಮೆಲ್ಲನೆ ಒರಸಿಕೊಂಡ.

ಕಾಲು ಎಳದು ಹಾಕಿಕೊಂಡು ಬಂದ ನಡು ವಯಸ್ಸಿನ ಹೆಣು ಮಗಳು 'ಯಣ್ಣಾ ನಾವು ನಿಮಗ ಓಟು ಹಾಕೀವಪಾ... ನನಗ ಹ್ಯಾಂಡಿಕಾಪ್ಡಿನವು ರೊಕ್ಕನೆ ಬರವಲ್ಲವು. ಈಗ ಭಿಕ್ಷೆ ಬೇಡಿ ತಿನ್ನಕತ್ತೀನಿ' ಎಂದು ಸೆರಿಗಿಲೆ ಕಣ್ಣೀರು ಒರಸಿಕೊಂಡಳು.

'ಹಾ... ಬರ್‍ತಾವ ಬರ್‍ತಾವ... ಲೇ ರುದ್ರ ಆಕಿ ಹೆಸರು ಬರುಕೋ. ಡಿಟೇಲ್ಸ ತಗೊ. ನನಗ ನೆನಪು ಮಾಡು' ಎಂದು ಆಕಿಗೆ ನೂರು ರುಪಾಯಿ ಕೊಟ್ಟ. ಆಕಿ ಕಣ್ಣಿಗಿ ಒತಿಗಂಡು ಕಾಲು ಎಳಕಂಡು ಹಿಂದಕ ಹೋದಳು.

ದುರುಗಪ್ಪ ಸಾಹುಕಾರರು ಸಮಯ ನೋಡಿಕೊಂಡರು. ಹತ್ತು ಗಂಟೆ ಆಗುತ್ತಿತ್ತು. ಗೌಡರು ನಾಷ್ಟಕ್ಕ ಕರೆದಿದ್ದರು. ಹೊತ್ತಾಯಿತು ಅನಿಸಿ ಸಡಕ್ಕನ ಎದ್ದು ನಿಂತು 'ಮಹಾ ಜನಗಳೆ. ನಿಮ್ಮ ಸಮಸ್ಯೆ ಎಲ್ಲಾ ನಮ್ಮ ರುದ್ರ ಬರಕಂಡಾನ. ನಾನು ಎಲ್ಲಾ ಈಡೇರುಸ್ತೀನಿ. ಈಗ ಒಂದು ಇಂಪರಟೆಂಟ್ ಮೀಟಿಂಗ್ ಐತಿ. ನಾನೆ ನಿಮ್ಮ ತಕ ಬರ್‍ತೀನಿ. ಎಲ್ಲಾರಿಗೆ ಊಟದ ವ್ಯವಸ್ಥಾ ಮಾಡ್ತಾರ ಉಂಡು ಹೋಗರಿ. ಮತ್ತ ಒಬ್ಬೊಬ್ಬರಿಗೆ ನೂರು ರುಪಾಯಿ ಕೊಡ್ತಾರ. ನಿಮ್ಮ